## 39. ಪಿಎಂಜೆಡಿವೈನಿಂದ ರೂ.1.3 ಲಕ್ಷ ಕೋಟಿ ಠೇವಣಿ

ಪ್ರಧಾನಮಂತ್ರಿ ಜನ್‌ಧನ್ ಯೋಜನೆ (ಪಿಎಮ್ ಜೆಡಿವೈ) ಯು ದೇಶದ ಆರ್ಥಿಕತೆಯ ಒಳಗೊಳ್ಳುವಿಕೆಯನ್ನು 6 ವರ್ಷಗಳ ಹಿಂದೆ ಜಾರಿಗೊಳಿಸಲಾಯಿತು. ಇದರಿಂದ 40.35 ಕೋಟಿ ಖಾತೆಗಳನ್ನು ತೆರೆದು ಒಟ್ಟು ರೂ.1.30 ಲಕ್ಷ ಕೋಟಿಗಳ ಮೊತ್ತವನ್ನು ಠೇವಣಿ ಇಡಲಾಗಿದೆ ಎಂದು ವಿತ್ತ ಸಚಿವಾಲಯ ಹೇಳಿದೆ.

ಈ ಯೋಜನೆಯನ್ನು ಮೊದಲು ಪ್ರಧಾನಿಯು ಆಗಸ್ಟ್ 15, 2014ರಲ್ಲಿ ಘೋಷಿಸಿದ್ದರು. ಇದನ್ನು ಆಗಸ್ಟ್ 28 ರಂದು ಜಾರಿಗೊಳಿಸಲಾಯಿತು. ಇದರಿಂದ ಬಡವರು ನೇರ ನಗದು ವರ್ಗಾವಣೆ ಮೂಲಕ ಸಬ್ಸಿಡಿ ಹಣವನ್ನು ಪಡೆಯುತ್ತಿದ್ದಾರೆ. ಇಂದಿಗೆ ಆರು ವರ್ಷಗಳ ಹಿಂದೆ ಪಿಎಂಜೆಡಿವೈಅನ್ನು, ಬ್ಯಾಂಕ್ ವಹಿವಾಟನ್ನು ನಡೆಸದಿರುವವರನ್ನು ಗಮನದಲ್ಲಿಟ್ಟುಕೊಂಡು ಜಾರಿಗೊಳಿಸಲಾಯಿತು. ಈ ಘನ ಉದ್ದೇಶವು ಇಡೀ ದೇಶದ ಚಿತ್ರಣವನ್ನು ಬದಲಿಸಿತು. ಕೋಟ್ಯಂತರ ಜನರಿಗೆ ಸಹಾಯಕವಾಗಿದೆ ಎಂದು ಪ್ರಧಾನಿ ಮೋದಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಕೇಂದ್ರವು ಈ ಯೋಜನೆಯ ಫಲಾನುಭವಿಗಳಿಗೆ ವಿಮೆಯಲ್ಲಿ ಒಳಗೊಳ್ಳಲು ಯೋಜಿಸಲಾಗಿದೆ. ಆರ್ಹ ಪಿಎಂಜೆಡಿವೈ ಖಾತೆದಾರರು ಪಿಎಂ ಜೆಜೆಬಿವೈ, ಪಿಎಂಎಸ್‌ಬಿವೈಯಲ್ಲಿ ಒಳಗೊಳ್ಳುವಂತೆ ಮಾಡಲಾಗಿದೆ. ಬ್ಯಾಂಕ್‌ಗಳಿಗೆ ಈಗಾಗಲೇ ಇದರ ಬಗ್ಗೆ ಸಂಪರ್ಕಿಸಲಾಗಿದೆ.

**ಪ್ರಮುಖ ಅಂಶಗಳು:–**

- 40.35 ಕೋಟಿ ಖಾತೆಗಳನ್ನು ತೆರೆದು, ಒಟ್ಟು ರೂ.1.30 ಲಕ್ಷ ಕೋಟಿಗಳ ಮೊತ್ತವನ್ನು ಠೇವಣಿ ಇಡಲಾಗಿದೆ.
- ಪ್ರತಿ ಖಾತೆಯಲ್ಲಿ ಸರಾಸರಿ ಮೊತ್ತ ರೂ.3,239 ಆಗಿದೆ.
- 40.35 ಕೋಟಿ ಖಾತೆಗಳನ್ನು ಇದುವರೆಗೂ ತೆರೆಯಲಾಗಿದೆ.
- ಬಡವರು ನೇರ ನಗದು ವರ್ಗಾವಣೆ ಮೂಲಕ ಸಬ್ಸಿಡಿ ಹಣವನ್ನು ಪಡೆಯುತ್ತಿದ್ದಾರೆ.
- ಶೇ.63.6 ಪಿಎಂಜೆಡಿವೈ ಖಾತೆದಾರರು ಗ್ರಾಮಾಂತರ ಪ್ರದೇಶದವರು ಮತ್ತು ಶೇ.55.2 ಮಹಿಳೆಯರು ಆಗಿದ್ದಾರೆ.
- ಪ್ರತಿ ತಿಂಗಳು ಮೂರು ತಿಂಗಳವರೆಗೆ ಮಹಿಳೆಯರಿಗೆ ರೂ.500 ತುಂಬಲಾಗಿದೆ.
- ಏಪ್ರಿಲ್ – ಜೂನ್ ಅವಧಿಯಲ್ಲಿ ಒಟ್ಟು ರೂ.30.705 ಕೋಟಿಗಳನ್ನು ಮಹಿಳೆಯರ ಖಾತೆಗೆ ತುಂಬಲಾಗಿದೆ.
- ಜನ್‌ಧನ್ ದರ್ಶಕ್ ಆ್ಯಪ್‌ನ ಸಹಾಯ ಪಡೆಯಬಹುದು.

ಆಧಾರ:ವಿಶ್ವವಾಣಿ, ದಿನಾಂಕ:29.08.2020